ಮೀನು ವಾಸನೆ! ಅಸಹ್ಯಪಟ್ಟುಕೊಂಡ.

ಸಾಹುಕಾರರ ಕೋಣೆಯ ಸುತ್ತಲೊಮ್ಮೆ ಕಣ್ಣೋಡಿಸಿದ. ತೊಳೆದಿಟ್ಟಂತೆ ಮಿರುಗುವ ನೀಲ ವರ್ಣದ ಗೋಡೆ, ತಿರುಗುತ್ತಿರುವ ಫ್ಯಾನು. ಬೆಳ್ಳಿಯಂತೆ ಮಿರುಗಿ ಓಲಾಡುವ ವಿದ್ಯುದ್ದೀಪ ಗುಚ್ಛ. ನೆಲದ ಮೇಲೆ ಹಾಸಿದ ರಕ್ತವರ್ಣದ ರತ್ನಗಂಬಳಿ. ನಾಲ್ಕು ಸೋಫಾ ಚೇರು. ನಡುವೆ ಸಣ್ಣ ಟೀಪಾಯಿ. ದೊಡ್ಡ ಮಂಚ. ಅದರ ಮೇಲೆ ಮೆತ್ತನೆಯ ಹಾಸಿಗೆ ಮೇಲೆ ಇಳಿಬಿಟ್ಟ ತೆಳುವಾದ ಸೊಳ್ಳೆ ಪರದೆ.

ತನ್ನ ಮೈಯನ್ನೊಮ್ಮೆ ಮೂಸಿ ನೋಡಿದ. ಮೀನು, ಬೆವರು ವಾಸನೆ... ಯಾರೋ ಅಮುಕಿ ತಳ್ಳುತ್ತಿರುವ ಅನುಭವವಾಗಿ ಧಿಗ್ಗನೆ ಎದ್ದು ನಿಂತ.

ಸಾಹುಕಾರರು ಒಳಗೆ ಬಂದು ಒಂದು ಕಾಗದದ ಪೊಟ್ಟಣವನ್ನು ಟೀಪಾಯಿಯ ಮೇಲಿಟ್ಟು ಬಾತ್‌ಟವೆಲನ್ನು ಅವನ ಕೈಗಿಡುತ್ತಾ,

'ಗಂಟೆ ಒಂಬತ್ತು ಕಳೆಯಿತು. ಹತ್ತು ಗಂಟೆಗೆ ಸರಿಯಾಗಿ ಖಾಜಿ ಸಾಹೇಬರು ಬರುತ್ತಾರೆ. ನೀನು ಸ್ನಾನ ಮಾಡಿ ಈ ಬಟ್ಟೆ ತೊಟ್ಟು ರೆಡಿಯಾಗಿರು...' ಎಂದರು.

'ನಾನು... ಮನೆಗೆ ಹೋಗಿ ಅಮ್ಮ, ಅಕ್ಕನೊಡನೆ ಹೇಳಿಬರುತ್ತೇನೆ' ಎಂದ ಅಬ್ದುಲ್ಲಾ ಮೆಲ್ಲನೆ.

'ಛೇ... ಛೇ... ಅದೆಲ್ಲಾ ಬೇಡ. ಈ ವಿಷಯ ಅವರಿಗೆಲ್ಲಾ ತಿಳಿದು ಪ್ರಚಾರವಾಗುವುದು ನನಗೆ ಇಷ್ಟವಿಲ್ಲ. ಬಾ... ಬಾತ್‌ರೂಮನ್ನು ತೋರಿಸುತ್ತೇನೆ...'

ಅಬ್ದುಲ್ಲಾ ಅವರ ಹಿಂದೆ ಹೊರಟ. ಬಾತ್‌ರೂಮಿನ ನೆಲದ ಹಾಸುಗಲ್ಲಿನ ಮೇಲೆ ಅವನ ಕಾಲಿನ ಕೊಳೆಯ ಅಚ್ಚು ಬಿದ್ದಿತು. ಬೇಸರಪಟ್ಟುಕೊಂಡ. ವಸ್ತ್ರಕಳಚಿ ನಳ್ಳಿಯ ತಣ್ಣಗಿನ ನೀರಿಗೆ ಮೈಯೊಡ್ಡಿದ. ಉಲ್ಲಾಸವೆನಿಸಿತು.

ಸ್ನಾನ ಮುಗಿಸಿ ಕೋಣೆಯೊಳಗೆ ಬಂದ. ಪೊಟ್ಟಣ ಬಿಡಿಸಿ ನೋಡಿದ. ಬಿಳೀ ಗರಿಗರಿಯಾದ ಜುಬ್ಬಾ, ಬನಿಯನ್ನು, ಚಡ್ಡಿ, ಮೌಲಾನಾ ಲುಂಗಿ, ಕರವಸ್ತ್ರ.

ಸಾಹುಕಾರರ ಕೋಣೆ ಈಗ ತನ್ನದು.

ಟವೆಲ್ಲಿನಿಂದ ತಲೆಯನ್ನು ಪುನಹ ಒರೆಸಿದ. ಪೊಟ್ಟಣದಲ್ಲಿದ್ದ ವಸ್ತ್ರಗಳನ್ನೆಲ್ಲ ತೊಟ್ಟುಕೊಂಡ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಂಡ. ಪರವಾಗಿಲ್ಲ, ಚೆನ್ನಾಗಿಯೇ ಕಾಣುತ್ತೇನೆ ಎಂದುಕೊಂಡ.

ಸಾಹುಕಾರರು ಉಪಯೋಗಿಸುವ ಯಾರ್ಡ್ಲಿ ಪೌಡರು, ಇಂಟಿಮೇಟ್ ಸೆಂಟು ನೋಡಿದ. ಈವತ್ತೊಂದು ದಿನ ಇವೆಲ್ಲಾ ನನ್ನವು. ನಾನೆಷ್ಟು ಸುಖಿ!

ಪರಿಮಳದೆಣ್ಣೆ ತಲೆಗೆ ಹಾಕಿ ಓರಣವಾಗಿ ತಲೆ ಬಾಚಿಕೊಂಡ. ಯಾರ್ಡ್ಲಿ ಪೌಡರನ್ನು ತೆಳುವಾಗಿ ಲೇಪಿಸಿಕೊಂಡ. ಇಂಟಿಮೇಟ್ ಸೆಂಟನ್ನು ಪುರ್ರನೆ ಮೈ ಇಡೀ ಹಾರಿಸಿಕೊಂಡ... ಎಂತಹಾ ಮಜಾ!

ಒಳಗೆ ಸಣ್ಣದನಿಯಲ್ಲಿ ವಾದವಾಗುತ್ತಿರುವಂತೆ ಕೇಳಿಬರುತ್ತಿತ್ತು. ಸಾಹುಕಾರರ ದನಿಯ ಪರಿಚಯವಿತ್ತು. ಇನ್ನೊಂದು ಹೆಣ್ಣುದನಿ?

ಒಮ್ಮೆಗೇ ಎಲ್ಲಾ ನಿಶ್ಶಬ್ದ!

ಸಾಹುಕಾರರು ನಡೆದ ಶಬ್ದ.

'ಹೋ... ಖಾಜಿ ಸಾಹೇಬರು... ಅಸ್ಸಲಾಂ ಅಲೈಕುಂ...'